ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.

**ಸಿ.ಸಿ. ಸಂಃ 1973/2021**

| | | |
|---|---|---|
| ಸಾಕ್ಷಿಯ ಹೆಸರುಃ | ರಾಮಾಶೆಟ್ಟಿ | ಫ್ರಾಸಾಃಃ 1 |
| ತಂದೆಯ ಹೆಸರುಃ | ಜವರಶೆಟ್ಟಿ | ಚಾಸಾಃಃ 1 |
| ವಯಸ್ಸುಃ | 58 ವರ್ಷ | ಪ್ರಮಾಣೀಕರಿಸಿದ ದಿಃ 22.01.2026 |
| ಉದ್ಯೋಗಃ | ವ್ಯವಸಾಯ | |
| ವಾಸ ಸ್ಥಳಃ | ಗಾಂಧಿನಗರ, ಪಿರಿಯಾಪಟ್ಟಣ ತಾಃ | |

ಮುಖ್ಯ ವಿಚಾರಣೆಃ ಸಸಅ ರಿಂದಃ

1. ನನಗೆ ಆರೋಪಿಗಳ ಪರಿಚಯವಿದೆ. ಈ ಪ್ರಕರಣದ ವಿಷಯ ನನಗೆ ಗೊತ್ತಿಲ್ಲ. ಚಾಸಾ-2 ರಿಂದ 8 ನನಗೆ ಗೊತ್ತು. ಆರೋಪಿತರು ನಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಗುಂಪು ಕಟ್ಟಿಕೊಂಡು ಬಂದು ಹಲ್ಲೆ ಮಾಡಿಲ್ಲ, ನಮಗೆ ಅವಾಚ್ಯವಾಗಿ ಬೈದಿಲ್ಲ, ಕೈಗಳಿಂದ, ದೊಣ್ಣೆಯಿಂದ ಅಥವಾ ಮಚ್ಚಿನಿಂದ ಹಲ್ಲೆ ಮಾಡಿಲ್ಲ, ಒದ್ದಿಲ್ಲ ಹಾಗೂ ನಮಗೆ ಕೊಲೆ ಬೆದರಿಕೆ ಹಾಕಿಲ್ಲ. ನಾನು ಆರೋಪಿತರ ವಿರುದ್ಧ ಯಾವುದೇ ದೂರು ನೀಡಿಲ್ಲ.

2. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.01 ಎಂದು, ಅದರಲ್ಲಿರುವ ತನ್ನ ಸಹಿಯ ನಿ.ಪಿ.01(ಎ) ಎಂದು ಗುರುತಿಸಲಾಯಿತು.

3. ನನ್ನ ಆರೋಪಿಯ ನಡುವೆ ಬಾಯಿ ಮಾತಿನ ಜಗಳ ಉಂಟಾಗಿದ್ದು ಈ ಬಗ್ಗೆ ನಾನು ಪೊಲೀಸರಿಗೆ ಮೌಖಿಕವಾಗಿ ತಿಳಿಸಿದ್ದು, ಸುಮಾರು 03 ವರ್ಷದ ಹಿಂದೆ ನಾನು ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಗಾಯಮಾಡಿಕೊಂಡು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಪೋಲಿಸರ ಕೋರಿಕೆಯ ಮೇರೆಗೆ ನಾನು ಸಹಿ ಮಾಡಿರುತ್ತೇನೆ. ನಿ.ಪಿ.01 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಮರು ಹೇಳಿಕೆ ಅಥವಾ ಮುಂದುವರಿದ ಹೇಳಿಕೆ ನೀಡಿಲ್ಲ.

(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಸಅ ರವರಿಂದಃ</u>

1. ದಿನಾಂಕ 16.11.2020 ರಂದು ಬೆಳ್ಳಿಗೆ 6.15 ಗಂಟೆ ಸಮಯದಲ್ಲಿ ಪಿರಿಯಾಪಟ್ಟಣ ಗಾಂಧಿನಗರ ಗ್ರಾಮದಲ್ಲಿ ನಮ್ಮ ಮನೆಯ ಬಳಿ ಚಾಸಾ.2 ಮೋಹನ್ ರವರ ಕಲಗಚ್ಚಿನ ಬಕೆಟ್ಟಿನ ವಿಷಯಕ್ಕೆ ಸಂಬಂಧಿಸಿದಂತೆ, 1 ಆರೋಪಿಯು ಸದರಿ ಕಲ್ಗಚ್ಚಿನ ಬಕೆಟ್ಟಿಗೆ ಕಾಲಿನಿಂದ ಒದ್ದು ಈ ರಸ್ತೆಯು ನಿಮ್ಮಪ್ಪಂದಾ ಎಂದು, ಏನೋ ಬೋಳಿ ಮಗನೆ ನೀನು ನಮ್ಮ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಾ ನನಗೆ ತಿರುಗಿ ಪ್ರಶ್ನೆ ಮಾಡುತ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದುರು ಎಂದರೆ ಸರಿಯಲ್ಲ.

2. ಜಗಳ ಬಿಡಿಸಲು ಹೋಗದ ನನಗೆ ಆರೋಪಿಗಳು ಬೋಳಿಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ಕೈಯಲ್ಲಿದ್ದ ಮಚ್ಚಿನಿಂದ ನನ್ನ ಬೆನ್ನಿನ ಹಿಂಭಾಗ ಬೀಸಿ ಹೊಡೆದರು ಎಂದರೆ ಸರಿಯಲ್ಲ.

3. ಜಗಳ ಬಿಡಿಸಲು ಬಂದ ಚಾಸಾ.5 ರವರಿಗೆ 1 ನೇ ಆರೋಪಿ ಅದೇ ಮಚ್ಚಿನಿಂದ ತಲೆಗೆ ಹೊಡೆದರು ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಬಂದ ಚಾಸಾ.6 ರವರಿಗೆ 3 ನೇ ಅರೋಪಿ ಒಂದು ಕಲ್ಲಿನಿಂದ ಬಲ ಕೈಗೆ ಹಾಗೂ 2 ನೇ ಆರೋಪಿ ದೊಣ್ಣೆಯಿಂದ ಬಲಕೈನ ಭುಜದ ಬಳಿ ಹೊಡೆದರು ಎಂದರೆ ಸರಿಯಲ್ಲ.

4. ನಂತರ 1 ನೇ ಆರೋಪಿ ಚಾಸಾ.8 ಭಾಗ್ಯಮ್ಮ ರವರಿಗೆ ಕಾಲಿನಿಂದ ಒದ್ದರು ಎಂದರೆ ಸರಿಯಲ್ಲ. ನಂತರ ನಮಗೆ ಆರೋಪಿತರು ಇವತ್ತು ತಪ್ಪಿಸಿಕೊಂಡಿದ್ದೀರಾ ನಿಮ್ಮನ್ನು ಇಂದಲ್ಲ ನಾಳೆ ಕೊಲೆ ಮಾಡದೇ ಬಿಡುವುದಿಲ್ಲವೆಂದು ಫ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ವಿಚಾರವಾಗಿ ನಾನು ಪೊಲೀಸರಿಗೆ ನಿಪಿ - 1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

5. ನಂತರ ದಿಃ 20.11.2020 ರಂದು ಈಗ ಓದಿ ಹೇಳಿ ಕೇಳಿಸಿಕೊಂಡ "ನಾನು ಮೇಲ್ಕಂಡ ವಿಳಾಸದಲ್ಲಿ ......… ನನ್ನ ಮುಂದುವರಿದ ಹೇಳಿಕೆಯನ್ನು ನೀಡಿರುತ್ತೇನೆ'' ಎಂದು ಮುಂದುವರಿದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮುಂದುವರಿದ ಹೇಳಿಕೆಯನ್ನು ನಿಪಿ - 2 ಎಂದು ಗುರುತಿಸಲಾಯಿತು.

6. ನಂತರ ದಿಃ 20.05.2021 ರಂದು ಈಗ ಓದಿ ಹೇಳಿ ಕೇಳಿಸಿಕೊಂಡ "ನಾನು ಮೇಲ್ಕಂಡ ವಿಳಾಸದಲ್ಲಿ ......… ನನ್ನ ಮುಂದುವರಿದ ಹೇಳಿಕೆಯನ್ನು ನೀಡಿರುತ್ತೇನೆ'' ಎಂದು ಮುಂದುವರಿದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮುಂದುವರಿದ ಹೇಳಿಕೆಯನ್ನು ನಿಪಿ - 3 ಎಂದು ಗುರುತಿಸಲಾಯಿತು.

7. ಈಗ ನಾವು ಮತ್ತು ಆರೋಪಿತರು ಪರಸ್ಪರ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದೇ ಕಾರಣಕ್ಕೆ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ವಕೀಲರಿಂದಃ

ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ